ಕೃಷ್ಣಾ ನದಿ ನೀರಿನ ಹಂಚಿಕೆ

1048 (425); ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ)

ಅ) ಕೃಷ್ಣಾ ನದಿ ನೀರಿನ ಹಂಚಿಕೆ ನ್ಯಾಯಾಧಿಕರಣದಿಂದ ಕರ್ನಾಟಕಕ್ಕೆ ಪೋಲಾವರಂ ನೀರಾವರಿ ಯೋಜನೆಯಿಂದ ಎಷ್ಟು ಟಿಎಂಸಿ ನೀರನ್ನು ನೀಡಲಾಗಿದೆ; ಈ ನೀರನ್ನು ನೀರಾವರಿಗೆ ಬಳಕೆ ಮಾಡಿಕೊಳ್ಳಲು ಇಲಾಖೆ ತೆಗೆದುಕೊಂಡಿರುವ ಕ್ರಮ ಏನು; ಈ ನೀರನ್ನು ಯಾವ ರೀತಿ ಹಂಚಿಕೆ ಮಾಡಲಾಗಿದೆ ಮತ್ತು ಯಾವ ಯಾವ ನದಿಗಳಿಂದ ಯಾವ ಯಾವ ಪ್ರದೇಶಗಳಿಗೆ ಹಂಚಿಕೆ ಮಾಡಲಾಗಿದೆ (ವಿವರ ನೀಡುವುದು);

ಆ) ತುಂಗಭದ್ರಾ ಉಪನದಿ ಕಣಿವೆಯಲ್ಲಿ ಕೃಷ್ಣಾ ನದಿ ನೀರಿನ ಹಂಚಿಕೆ ನ್ಯಾಯಾಧೀಕರಣ 1 ಮತ್ತು 2 ಸೇರಿ 356 ಟಿಎಂಸಿ ನೀರನ್ನು ಮಾತ್ರ ಬಳಸಿಕೊಳ್ಳಲು ಆದೇಶ ಮಾಡಲಾಗಿದೆಯೇ;

ಇ) ಹಾಗಿದ್ದಲ್ಲಿ, ಪೋಲಾವರಂ ನೀರಾವರಿ ಯೋಜನೆಯಿಂದ ತುಂಗಭದ್ರಾ ಉಪ ಕಣಿವೆಯಲ್ಲಿ ಹೆಚ್ಚುವರಿ ನೀರಿನ ಬಳಕೆ ಮಾಡಿಕೊಂಡಲ್ಲಿ ನ್ಯಾಯಾಧಿಕರಣದ ಆದೇಶದ ಉಲ್ಲಂಘನೆ ಆಗುವುದಿಲ್ಲವೆ;

ಈ) ಹಾಗಿದ್ದಲ್ಲಿ, ತುಂಗಭದ್ರಾ ಉಪ ನದಿ ಕಣಿವೆ ಪೋಲಾವರಂನಿಂದ ಹಂಚಿಕೆ ಮಾಡಲಾದ ನೀರನ್ನು ಕೃಷ್ಣಾ ನದಿಗೆ ವರ್ಗಾಯಿಸಲಾಗುತ್ತ ದೆಯೇ?

ಶ್ರೀ ಎಂ. ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) ಗೋದಾವರಿ ಜಲ ವಿವಾದ ಅಂತಿಮ ಆದೇಶ (1980)ರ ಕ್ಲಾಸ್ ವಿ (ಸಿ)ರಲ್ಲಿ ಅಳವಡಿಸಲಾದ ದಿನಾಂಕ: 04.08.1978ರ ಒಪ್ಪಂದದ ಕ್ಲಾಸ್ – 7(ಎ) ರನ್ವಯ ಒಟ್ಟಾರೆ 80 ಟಿಎಂಸಿ ನೀರನ್ನು ಗೋದಾವರಿ ಕೊಳ್ಳದ ಪೊಲ್ಲಾವರಂ ಯೋಜನೆಯಿಂದ ಕೃಷ್ಣಾ ಕೊಳ್ಳಕ್ಕೆ ತಿರುವು ಗೊಳಿಸಬಹುದಾಗಿದ್ದು, ಇದರಲ್ಲಿ ಕರ್ನಾಟಕ ಪಾಲು 23 ಟಿಎಂಸಿ ಆಗಿರುತ್ತದೆ.

ಆ) ಕರ್ನಾಟಕ ಸರ್ಕಾರದ ಆದೇಶ ದಿನಾಂಕ: 13.03.2012ರಲ್ಲಿ ಈ 23 ಟಿಎಂಸಿ ನೀರಿನ ಬಳಕೆಯನ್ನು ಈ ಕೆಳಕಂಡ 16 ಯೋಜನೆಗಳಲ್ಲಿ ಬಳಸಲು ಉದ್ದೇಶಿಸಲಾಗಿದೆ:

ಕ್ರಸಂ	ಯೋಜನೆಯ ಹೆಸರು	ಹಂಚಿಕೆ ಮಾಡಿರುವ ನೀರಿನ ಪ್ರಮಾಣ (ಟಿಎಂಸಿಗಳಲ್ಲಿ)
1	ನಂದವಾಡಗಿ ಏತ ನೀರಾವರಿ ಯೋಜನೆ	3.75
2	ಭೂದಿಹಾಳ ಏತ ನೀರಾವರಿ ಯೋಜನೆ	1.00
3	ಗೊಗಲ್ ಬ್ಯಾರೇಜ್	0.50
4	ತುಬಚಿ–ಬಬಲೇಶ್ವರ ಏತ ನೀರಾವರಿ ಯೋಜನೆ	2.80
5	ಮಹಾಲಕ್ಷ್ಮಿ ಏತ ನೀರಾವರಿ ಯೋಜನೆ	0.52
6	ಶಿಗ್ಗಾಂವ್ ಏತ ನೀರಾವರಿ ಯೋಜನೆ	1.50
7	ಮಲಪ್ರಭಾ ನದಿಗೆ ಅಡ್ಡಲಾಗಿ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಮಲಪ್ರಭಾ ಯೋಜನೆಯ ಡ್ಯಾಮ್ಸ್ ಬಳಿ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣ	
	(ಅ) ಎಸ್. ಕೆಸರಟ್ಟಿ-ಆಲೂರ	0.009
	(ಆ) ಕಳಸ	0.023
	(ಇ) ನಂದಿಕೇಶ್ವರ	0.028
	ಒಟ್ಟು:	0.060
8	ತುಪ್ಪರಿಹಳ್ಳ ನೀರಾವರಿ ಯೋಜನೆ	1.00

9	ಬೆಣ್ಣ ಹಳ್ಳಕ್ಕೆ ಅಡ್ಡಲಾಗಿ ಐದು ಏತ ನೀರಾವರಿ ಯೋಜನೆಗಳ ನಿರ್ಮಾಣ. (ಅ) ಮೂಗನೂರು ಏತ ನೀರಾವರಿ (ಆ) ಮದುಗುಣಕಿ ಏತ ನೀರಾವರಿ (ಇ) ಹದ್ಲಿ–ಗಂಗಾಪುರ ಏತ ನೀರಾವರಿ (ಈ) ಅಮರಗೋಳ್ ಏತ ನೀರಾವರಿ (ಉ) ಗೊಬ್ಬರಗುಂಪಿ ಒಟ್ಟು:	 0.089 0.089 0.089 0.089 0.091 0.447
10	ದಂಡಾವತಿ ನೀರಾವರಿ ಯೋಜನೆ	1.85
11	ಭದ್ರಾ ಮೇಲ್ದಂಡೆ ಯೋಜನೆ (ಹೆಚ್ಚುವರಿ)	2.40
12	ಹಬ್ಬೆ ಫಾಲ್ಸ್	1.45
13	ಅಲವಂಡಿ ಬೆಟಗೆರೆ ಏತ ನೀರಾವರಿ	0.50
14	ಸಣ್ಣ ವಿಯರ್‌ಗಳು, ಕೆರೆಗಳನ್ನು ತುಂಬಿಸುವುದು ಮತ್ತು ಎಸ್. ಸಿ. ಪಿ./ ಟಿ.ಎಸ್.ಪಿ. ಕಾಮಗಾರಿಗಳು	1.223
15	ಕುಡಿಯುವ ನೀರು ಯೋಜನೆ (ಪಿ.ಆರ್.ಇ.ಡಿ. ಮತ್ತು ಕೆ.ಯು.ಡಬ್ಲ್ಯೂ. ಆಂಡ್ ಡಿ.ಬಿ.)	2.00
16	ಕೈಗಾರಿಕೆ ಬಳಕೆಗಾಗಿ	2.00
	ಒಟ್ಟು	**23.00**

ಇ) ದಿನಾಂಕ: 19.03.2012ರ ಆದೇಶದಲ್ಲಿನ ನೀರು ಹಂಚಿಕೆ ಆಧಾರಗಳ ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಯೋಜನಾವಾರು ಹಂಚಿಕೆ ಹಾಗೂ ಹಂಚಿಕೆಯ ಆಧಾರದ ವಿವರಗಳನ್ನು ಈ ಉತ್ತರದೊಂದಿಗೆ ಲಗತ್ತಿಸ ಲಾಗಿದೆ.

ಕೃಷ್ಣ ಜಲ ವಿವಾದ ನ್ಯಾಯಾಧಿಕರಣ 11ರ ದಿನಾಂಕ: 29.11.2013 ರಂದು ನೀಡಿರುವ ಅಂತಿಮ ಆದೇಶದ ಕ್ಲಾಸ್-ಎಕ್ಸ್(2) (ಎ)ರಲ್ಲಿ ಸೂಚಿಸಿರುವಂತೆ ತುಂಗಭದ್ರಾ ಕೆ-8 ಉಪ ಕೊಳ್ಳದಲ್ಲಿ ಶೇ.65ರ ಅವಲಂಬಿತ ಜಲ ವರ್ಷದಲ್ಲಿ 356 ಟಿಎಂಸಿ ನೀರಿನ ಪ್ರಮಾಣಗಿಂತ ಹೆಚ್ಚಾಗಿ ನೀರನ್ನು ಉಪಯೋಗಿಸಿಕೊಳ್ಳಲು ತಡೆ ಹಿಡ್ಡಿರುತ್ತದೆ.

ಗೋದಾವರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ, ಆದೇಶ (1980)ರ ಕ್ಲಾಸ್-ವಿ (ಸಿ)ರಲ್ಲಿ ಅಳವಡಸಲಾದ ಭಾಗವಾಗಿರುವ ದಿನಾಂಕ: 04.08.1978ರ ಒಪ್ಪಂದದ ಕ್ಲಾಸ್-7 (ಎ)ರನ್ವಯ 80 ಟಿಎಂಸಿ ನೀರನ್ನು ನಾಗಾರ್ಜುನಸಾಗರ ಯೋಜನೆಯ ಪೋಲ್ಪಾಗದಲ್ಲಿನ ಯೋಜನೆಗಳಲ್ಲಿ ಉಪಯೋಗಿಸಬಹುದಾಗಿದೆ. ಆದುದರಿಂದ, ಸದರಿ 80 ಟಿಎಂಸಿ ನೀರಿನಲ್ಲಿ ಕರ್ನಾಟಕ ರಾಜ್ಯದ ಪಾಲು 23 ಟಿಎಂಸಿ ನೀರನ್ನು ನಾಗಾರ್ಜುನಸಾಗರ ಯೋಜನೆಯ ಪೋಲ್ಪಾಗದಲ್ಲಿರುವ ತುಂಗಭದ್ರಾ ಉಪ ಕಣಿವೆಯಲ್ಲಿ ಉಪಯೋಗಿಸಲು ಕರ್ನಾಟಕ ರಾಜ್ಯವು ಪೂರ್ಣ ಹಕ್ಕನ್ನು ಹೊಂದಿರುತ್ತದೆ.

ಈ) ಗೋದಾವರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ ಆದೇಶ (1980)ರ ಕ್ಲಾಸ್-ವಿ (ಸಿ)ರಲ್ಲಿ ಅಳವಡಿಸಲಾದ ಭಾಗವಾಗಿರುವ ದಿನಾಂಕ: 04.08.1978ರ ಒಪ್ಪಂದದಲ್ಲಿ ಗೋದಾವರಿ ನದಿಯಿಂದ ತಿರುವುಗೊಳಿಸುವುದನ್ನು ಹೊರತುಪಡಿಸಿ ಬೇರೆ ಯಾವುದೇ ನೀರನ್ನು ಕೃಷ್ಣಾ ಕೊಳ್ಳಕ್ಕೆ ತಿರುವುಗೊಳಿಸಿರುವುದಿಲ್ಲ.

ಏತ ನೀರಾವರಿ ಯೋಜನೆಗಳು

1049 (936); ಶ್ರೀ ಭೀಮಾನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಅ) ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಂದಿದುರ್ಗ ಮತ್ತು ಕೆಂಚೆಟ್ಟನಹಳ್ಳಿ ಗ್ರಾಮಗಳಿಗೆ 2ನೇ ಹಂತದ ಹೊಸ ಏತ ನೀರಾವರಿ ಯೋಜನೆ ರೂಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;